ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಮೇಲ್ಕಂಡ ಕೆಲಸದ ೮.೭೫ಲಕ್ಷ ರೂ.ಗಳ ಅಂದಾಜಿಗೆ ಫೆಬ್ರುವರಿ ೧೯೮೭ರಲ್ಲಿ ಮಂಜೂರಾತಿ ನೀಡಲಾಗಿದ್ದು ಕೆಲಸವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಹೋಬಳಿ ಗಿಡದಾಗಲ ಹಳ್ಳಿ ಬಡವನ ಹಳ್ಳಿ ರಸ್ತೆಗಳ ಬಗ್ಗೆ

೧೪೧೮ **ಶ್ರೀ ಜಿ. ಎಸ್. ಶಿವನಂಜಪ್ಪ** (ಗುಬ್ಬಿ).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದೊಡ್ಡೇರಿ ಹೋಬಳಿ ಗಿಡದಾಗಲ ಹಳ್ಳಿ-ಬಡವನಹಳ್ಳಿ ರಸ್ತೆಗೆ ೧೯೮೫-೮೬, ೮೬-೮೭ರಲ್ಲಿ ಯಾವ ಯಾವ ಖಾತೆಯಲ್ಲಿ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ ಪೂರ್ಣ ವಿವರಗಳನ್ನು ಕೊಡುವುದು.

ಆ) ಖರ್ಚು ಮಾಡಿರುವ ಹಣಕ್ಕೆ ಸರಿಯಾಗಿ ಸ್ಥಳದಲ್ಲಿ ಕೆಲಸಗಳು ನಡೆದಿದೆಯು ಹಾಗಿಲ್ಲದಿದ್ದಲ್ಲಿ, ಆ ಬಗ್ಗೆ ಸರಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೧೯೮೫-೮೬ ಮತ್ತು ೧೯೮೬ ರಿ ನೇ ಸಾಲಿನಲ್ಲಿ ಮಂಜೂರಾದ ಕೆಲಸದ ವಿವರ ಹಾಗೂ ವೆಚ್ಚ ಮಾಡಿರುವ ಹಣದ ವಿವರ ಈ ರೀತಿ ಇದೆ.

ಶೀರ್ಷಿಕೆ	ಕೆಲಸದ ಹೆಸರು	ಅಂದಾಜು ಹಣ ಖರ್ಚು (ರೂಗಳು)		ಷರಾ
		೧೯೮೫-೮೬		
ಸೇತುಬಂಧನ	ಬಡವನಹಳ್ಳಿ ಗಿಡದಾಗಲ ಹಳ್ಳಿ ರಸ್ತೆ ಕಿ.ಮಿ. ೩ರಲ್ಲಿ ಮೋರಿ ನಿರ್ಮಾಣ.	೨೦,೦೦೦	೧೯,೬೦೦	ಮೋರಿ ಕೆಲಸವು ಮುಗಿದಿದೆ.
೩೩೭ ಆರ್ ಮತ್ತು ಬಿ ವಿಶೇಷ ದುರಸ್ತಿ	ಬಡವನಹಳ್ಳಿ ಗಿಡದಾಗಲ ಹಳ್ಳಿ ರಸ್ತೆ ಅಭಿವೃದ್ಧಿ	೨೪,೦೦೦	೨೨,೦೦೦	ಸದರಿ ರಸ್ತೆಯು ಗುಡ್ಡಗಾಡಿನಲ್ಲಿ ಹಾದು ಹೋಗುವುದರಿಂದ ಕಿ.ಮಿ. ೦.೫ ರಿಂದ ೫.೦೦ ಕಿ.ಮಿ. ವರೆಗಿನ ರಸ್ತೆಯು ಭಾಗದಲ್ಲಿ ಮಣ್ಣು ಕಾವಂಗಾರಿ ಮಾಡಿ ಅಭಿವೃದ್ಧಿ ಪಡಿಸಲಾಗಿದೆ.

		೧೯೮೬–೮೭		
೮೧೪ ಸಿಡಿಪಿ ಎನ್ ಆರ್ ಇಪಿ	ಬಡವನಹಳ್ಳಿ ಗಿಡದಾಗಲ ಹಳ್ಳಿ ರಸ್ತೆ ಅಭಿವೃದ್ಧಿ	೨೦,೦೦೦	೨೦,೦೦೦	ಈ ರಸ್ತೆಯ ೫ ರಿಂದ ೧೧ನೇ ಕಿ. ಮೀ. ಭಾಗವನ್ನು ಗ್ರಾವಲ್ ಮತ್ತು ಮಣ್ಣಿನ ಕಾಮಗಾರಿ ಮಾಡಿ ಅಭಿವೃದ್ಧಿ ಪಡಿಸಲಾಗಿದೆ.

ಆ) ಕೆಲಸವು ಸಮರ್ಪಕವಾಗಿ ನಡೆದಿದೆಯೆಂದು ವರದಿಯಾಗಿದೆ. ನ್ಯೂನತೆಗಳೇನಾದರೂ ಇದ್ದಲ್ಲಿ ಸರ್ಕಾರದ ಗಮನಕ್ಕೆ ತಂದರೆ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲಾ ಅಧ್ಯಾಪಕರ ಖಾಲಿ ಇರುವ ಬಗ್ಗೆ

೧೨೭೩. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೋಪಾಧ್ಯಾಯರ ಸಂಖ್ಯೆ ಎಷ್ಟು ?

ಆ) ಉಪಾಧ್ಯಾಯರಿಲ್ಲದೇ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ, ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

ಇ) ಜಿಲ್ಲಾ ಆಯ್ಕೆ ಸಮಿತಿಗಳನ್ನು ರಚಿಸಲು ಸರ್ಕಾರ ಉದ್ದೇಶಿಸಿದೆಯೇ ? ಹಾಗಿದ್ದಲ್ಲಿ, ಆ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ೫೦೬೩

ಆ) ಬಂದಿದೆ. ಉಪಾಧ್ಯಾಯರ ಹುದ್ದೆಗಳನ್ನು ಜಿಲ್ಲಾ ನೇಮಕಾತಿ ಸಮಿತಿಗಳ ಮೂಲಕ ಭರ್ತಿ ಮಾಡಲು ಅಗತ್ಯಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಹೌದು ಸರ್ಕಾರವು ಜಿಲ್ಲಾ ಆಯ್ಕೆ ಸಮಿತಿಗಳ ರಚನೆ ಮಾಡುತ್ತಿದೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇರುವ ಶಿಕ್ಷಕರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಬಗ್ಗೆ

೧೨೭೬. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ವಿಶ್ವವಿದ್ಯಾನಿಲಯದಲ್ಲಿರುವ ಪ್ರೊಫೆಸರ್, ರೀಡರ್ಸ್ ಹಾಗೂ ಲೆಕ್ಚರರ್ ಗಳೆಷ್ಟು ? ಇವರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರೆಷ್ಟು ?